ಮಾತಿನ ಆಕರ್ಷಣೆ ಮರೆಸಿಬಿಡುತ್ತದೆ. ಈ ಆಕರ್ಷಣೆ ನಮ್ಮಲ್ಲಿ ಮೋಹದ ಬೀಜವನ್ನು ಬಿತ್ತುತ್ತದೆ. ಮೋಹ ಬುದ್ಧಿಯ ಹಾದಿಯನ್ನು ತಪ್ಪಿಸುತ್ತದೆ. ಆಗ ಅನರ್ಥಗಳ ಪರಂಪರೆಯೇ ಎದುರಾಗುತ್ತದೆ. ಕೊನೆಗೆ ಅದು ದುರಂತದಲ್ಲಿ ಕೊನೆಯಾಗುತ್ತದೆ. ಈ ಮೋಹವನ್ನು ಕುರಿತಾಗಿರುವ ಗೀತೆಯ ಮಾತುಗಳು ತುಂಬ ಪ್ರಸಿದ್ಧವಾದುದು:

*ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ||*
*ಕ್ರೋಧಾತ್ ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ |*
*ಸ್ಮೃತಿಭ್ರಂಶಾದ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ||*

'ಸಂಪರ್ಕದಿಂದ ಆಸೆ ಹುಟ್ಟುತ್ತದೆ; ಆಸೆಯಿಂದ ಕೋಪ; ಕೋಪದಿಂದ ಮೋಹ; ಮೋಹದಿಂದ ಬುದ್ಧಿ ಕೆಡುತ್ತದೆ; ಬುದ್ಧಿ ಕೆಟ್ಟ ಮೇಲೆ ಎಲ್ಲವೂ ನಾಶವಾಗುತ್ತದೆ' ಎನ್ನುತ್ತಿದೆ ಗೀತೆ. ಆಮೆಯ ವಿಷಯದಲ್ಲಿ ಇವೆಲ್ಲವೂ ಕ್ರಮವಾಗಿಯೇ ನಡೆಯಿತೆನ್ನಿ! ಅದಕ್ಕೆ ಮಾತಿನ ಚಟವಿದ್ದುದ್ದರಿಂದ ಬೇರೆಯವರ ಮಾತನ್ನೂ ಕೇಳಿಸಿಕೊಳ್ಳುವ ಉತ್ಸಾಹ; ಊರ ಜನರ ಮಾತನ್ನು ಅದು ಕೇಳಿಸಿಕೊಳ್ಳುತ್ತಲೇ ಇತ್ತು. ಅವರು ಮಾತನಾಡುತ್ತಿದ್ದಾರೆ, ನನಗೆ ಮಾತ್ರ ಮಾತನಾಡಲು ಆಗುತ್ತಿಲ್ಲ ಎಂದು ಕೋಪ ಹುಟ್ಟಿತು; ಆಗ ಅದರ ಮಾತಿನ ಚಟ ಮೋಹವಾಗಿ ಕಾಡಿತು. ಹಾರುತ್ತಿರುವಾಗ ಮಾತನಾಡಬೇಡ – ಎಂದು ಆ ಪಕ್ಷಿಗಳು ಹೇಳಿದ್ದು ಮೋಹದ ಕಾರಣದಿಂದಾಗಿ ಮರೆತುಹೋಯಿತು; ಎಚ್ಚರಿಕೆಯ ಮಾತು ಮರೆತ ಕಾರಣ ಬುದ್ಧಿಯ ಹಾದಿ ತಪ್ಪಿತು; ಬುದ್ಧಿಯೇ ದಿಕ್ಕು ತಪ್ಪಿದಮೇಲೆ ಎಲ್ಲವೂ ನಾಶವಾದಂತೆಯೇ ಸರಿ.

'ಮಾತು ಆಡಿದರೆ ಹೋಯ್ತು; ಮುತ್ತು ಒಡೆದರೆ ಹೋಯ್ತು', 'ಮಾತು ಬಲ್ಲವನಿಗೆ ಜಗಳವಿಲ್ಲ'; 'ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು'; 'ಮಾತೇ ಸಂಪತ್ತು, ಮಾತೇ ಆಪತ್ತು'; 'ಮಾತೇ ಮುತ್ತು, ಮಾತೇ ಕುತ್ತು'; 'ಮಾತೇ ಮಾಣಿಕ್ಯ' – ಮುಂತಾದ ಹಲವು ಗಾದೆಗಳು ಮಾತಿನ ಮಹತ್ವವನ್ನು ಎತ್ತಿಹಿಡಿಯುತ್ತಿವೆ. ಇಷ್ಟು ಶಕ್ತಿಶಾಲಿಯಾಗಿರುವ ಮಾತನ್ನು ನಾವು ಔಚಿತ್ಯವರಿಯದೆ ದುರ್ಬಳಕೆ ಮಾಡಿದರೆ ಆಗ ಅದೇ ನಮಗೆ ಮಾರಕವಾಗುವುದರಲ್ಲಿ ಅಚ್ಚರಿಯೇನಿಲ್ಲವಷ್ಟೆ! ಸುಸಂಸ್ಕೃತನಲ್ಲಿರುವ ಐದು ಗುಣಗಳನ್ನು ಡಿವಿಜಿಯವರು ಪಟ್ಟಿ ಮಾಡಿದ್ದಾರೆ. ಅದರಲ್ಲಿ ಮೊದಲನೆಯದು 'ಸ್ವಸ್ಥಾನಪರಿಜ್ಞಾನ'; ಎಂದರೆ ನಾವು ಎಲ್ಲಿದ್ದೇವೆ ಎಂಬುದರ ಅರಿವು. ನಾವು ಮಾತನಾಡುವಾಗ ಈ ಅರಿವಿನ ಆವಶ್ಯಕತೆ ತುಂಬ ಹೆಚ್ಚು. ಆಮೆಯ ಗತಿಯನ್ನೇ ನೋಡಿ. ಕಡ್ಡಿಯನ್ನು ಬಾಯಲ್ಲಿ ಹಿಡಿದಿರುವಾಗ, ಬಾಯನ್ನು ತೆಗೆದರೆ ಕಡ್ಡಿಯ ಹಿಡಿತ ತಪ್ಪುತ್ತದೆ ಎಂಬ ತಿಳಿವಳಿಕೆ ಸಾಮಾನ್ಯವಾದುದು. ಆದರೆ ಅದಕ್ಕೆ ನಾನೆಲ್ಲಿದ್ದೇನೆ – ಎಂಬ ಅರಿವೇ ಹೊರಟುಹೋಗಿತ್ತು. ಅದರ ಪರಿಣಾಮವಾಗಿ ಅದು ಪ್ರಾಣವನ್ನೇ ಕಳೆದುಕೊಳ್ಳಬೇಕಾಯಿತು.

ಸ್ವಸ್ಥಾನಪರಿಜ್ಞಾನವನ್ನು ಕಳೆದುಕೊಂಡು ನಾವು ಕೂಡ ನಿತ್ಯದ ವ್ಯವಹಾರಗಳಲ್ಲಿ ಎಷ್ಟೋ ತಪ್ಪುಗಳನ್ನು ಮಾಡುತ್ತಿರುತ್ತೇವೆ. ಮಕ್ಕಳ ಮುಂದೆ ಸುಳ್ಳು ಹೇಳಬಾರದು, ಜಗಳ ಆಡಬಾರದು, ಯಾರ ಬಗ್ಗೆಯೂ ಕೆಟ್ಟದ್ದಾಗಿ ಮಾತನಾಡಬಾರದು – ಎಂಬ ತಿಳಿವಳಿಕೆಯನ್ನು ಕಳೆದುಕೊಂಡು ಮಾತಿನ ಕೆಟ್ಟ ಬಳಕೆಯಲ್ಲಿ ತೊಡಗುತ್ತೇವೆ. ನಮ್ಮ ಇಂಥ ಸಂಸ್ಕಾರರಹಿತ ಮಾತುಗಳನ್ನು ಕೇಳಿಸಿಕೊಂಡು ಬೆಳೆಯುವ ಮಕ್ಕಳು ನಾಳೆ ಮಾತಿನ ಸಂಯಮವನ್ನಾಗಲೀ ಸೌಂದರ್ಯವನ್ನಾಗಲೀ ಹೇಗೆ ಕಲಿತಾರು? ಗುರು–ಹಿರಿಯರ